ಮಂಡಳಿಯ ಗಮನಕ್ಕೆ ಬಂದಾಗ ಹಾಗೂ ಸಾರ್ವಜನಿಕರಿಂದ ದೂರುಗಳು ಬಂದಾಗ ಮಂಡಳಿಯು ಅಂತಹ ಕೆಟ್ಟು ಹೋಗಿರುವ ಕೊಳವೆ ಬಾವಿಗಳ ದುರಸ್ತಿಕಾರ್ಯವನ್ನು ತಕ್ಷಣ ಕೈಗೊಳ್ಳುತ್ತಿದೆ. ಈ ಕಾರ್ಯದ ನಿಮಿತ್ತ ಜಲಮಂಡಳಿಯಲ್ಲಿ ಪ್ರಸ್ತುತ ಮೂರು ಉಪವಿಭಾಗಳಿದ್ದು ಇದರ ನಿರ್ವಹಣೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಇರುತ್ತಾರೆ.

ವಿಷಯ:- ಉತ್ತರ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ ಕಾಮಗಾರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 715 (1171)

ವಿಶ್ವೇಶ್ವರ ಹೆಗಡೆ (ಅಂಕೋಲ):- ಮಾನ್ಯ ಪ್ರದೇಶಾಭಿವೃದ್ಧಿ ಹಾಗೂ ಕಾಡಾ ಈ ಕೆಳಕಂಡ ರಾಜ್ಯ ಸಚಿವರು ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಕಾಮಗಾರಿಗಳು ಅದೇ ವರ್ಷ ಪ್ರಾರಂಭವಾಗದೇ ಇರಲು ಕಾರಣವೇನು?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದಿನ ವರ್ಷದಲ್ಲಿ ಆಗದೇ ಇದ್ದ ಕಾಮಗಾರಿಯ ಹಣ ಮುಂದಿನ ವರ್ಷ ಬಿಡುಗಡೆ ಮಾಡಲಾಗುವ ಹಣದಲ್ಲಿ ಸೇರಿಸಲು ಕಾರಣವೇನು?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಇದರಿಂದ ಕ್ಷೇತ್ರದ ಅಭಿವೃದ್ಧಿ ಆಗದೇ ಇರುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಈ ವಿಷಯದ ಬಗ್ಗೆ 1996-97ನೇ ಸಾಲಿನಲ್ಲಿ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):-

ಅ) ಪ್ಲಾನ್ಸ್ ಮತ್ತು ಅಂದಾಜು ಪಟ್ಟಿಗಳಿಗೆ ಅನುಮೋದನೆ ಹಾಗೂ ಟೆಂಡರನ್ನು ಅಂತಿಮಗೊಳಿಸಲು ತಡವಾಗಿರುವುದೇ ಕೆಲವು ಕಾರಣಗಳು.

ಆ) ಹಿಂದಿನ ಸಾಲಿನಿಂದ ಮುಂದುವರೆದ ಕಾಮಗಾರಿಗಳನ್ನು ಮುಂದಿನ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಬೇಕಾಗಿರುತ್ತದೆ ಮತ್ತು ಪೂರ್ಣಗೊಳಿಸಬೇಕಾಗಿರುತ್ತದೆ.

ಇ) ಮುಂದುವರೆದ ಕಾಮಗಾರಿಗಳನ್ನು 1996-97ನೇ ಸಾಲಿನಲ್ಲಿ ಮುಗಿಸಲು ಪ್ರಯತ್ನ ಪಡಲಾಗುವುದು.

ವಿಷಯ:- 1995-96ನೇ ಸಾಲಿನಲ್ಲಿ ಮಂಜೂರಾಗಿರುವ ಕೆರೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 654 (1070)

ಶ್ರೀ ಬಸನಗೌಡ ರಾ.ಪಾಟೀಲ್ (ವಿಜಾಪುರ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಮತ್ತು 1995-96ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ಮಂಜೂರಾಗಿರುವ ಕೆರೆಗಳು ಎಷ್ಟು? (ವಿಧಾನಸಭೆ ಮತ ಕ್ಷೇತ್ರವಾರು ಮಾಹಿತಿ ನೀಡುವುದು)

ಆ) ಯಾವ ಯಾವ ಊರುಗಳಲ್ಲಿ ಹೊಸದಾಗಿ ಕೆರೆಗಳನ್ನು ಮಂಜೂರು ಮಾಡಲಾಗಿದೆ?

ಇ) ಹೊಸ ಕೆರೆಗಳ ನಿರ್ಮಾಣಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಈ) ಹಾಗಿದ್ದಲ್ಲಿ, ಸದರಿ ಕೆರೆಗಳನ್ನು ತೀವ್ರವಾಗಿ ಮುಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ)

	1994-95	1995-96
ನೀರಾವರಿ ಇಲಾಖಾ ವತಿಯಿಂದ		
ಮಂಜೂರಾದ ಹೊಸ ಕೆರೆಗಳ ಸಂಖ್ಯೆ	6	3
ಜಿಲ್ಲಾ ಪಂಚಾಯತ್ ವತಿಯಿಂದ		
ಮಂಜೂರಾದ ಹೊಸ ಕೆರೆಗಳ ಸಂಖ್ಯೆ	1	-

(ವಿವರ ಲಗತ್ತಿಸಿದೆ).

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕೈಗೊಳ್ಳಲಾಗುವುದು.

ವಿಷಯ:- ವಿದ್ಯುತ್ ಟ್ರಾನ್ಸ್‌ಫಾರ್ಮರಗಳು ಸುಟ್ಟಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 676 (1068)

ಶ್ರೀ ಎಸ್.ಪಿ.ಮುದ್ದಹನುಮೇಗೌಡ ಕುಣಿಗಲ್:- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರುಗಳು ಸುಟ್ಟುಹೋಗಿ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.